ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ

ಸಿ.ಸಿ. ನಂ.**1580/2024**

ಪಿರ್ಯಾದುದಾರರುಃ ರಾಜ್ಯದ ಪರವಾಗಿ ಗೋಕಾಕ ಶಹರ ಪೊಲೀಸ್ ಠಾಣೆ,

- ವಿರುದ್ಧ -

ಆರೋಪಿತರುಃ 1. ಶಬ್ಬಿರ ಖಾದೀರಸಾಬ ಅತ್ತಾರ,
55 ವರ್ಷ, ಸಾಃ ಹಳಭಾಗಗಲ್ಲಿ, ಗೋಕಾಕ.

2. ಸಮೀರ ಶಬ್ಬಿರ ಅತ್ತಾರ,
23 ವರ್ಷ, ಸಾಃ ಹಳಭಾಗಗಲ್ಲಿ ಗೋಕಾಕ.

# ದೋಷಾರೋಪಣೆ

ಶ್ರೀ ರಾಜೀವ ಗೋಳಸಾರ, ಬಿ.ಎ., ಎಲ್.ಎಲ್.ಎಂ., ಪ್ರಧಾನ ಪ್ರ.ದ.ನ್ಯಾ. ದಂಡಾಧಿಕಾರಿ ಯಾದ ನಾನು, ಆರೋಪಿತರಾದ ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆ,

ಪಿರ್ಯಾದುದಾರ ಹಾಗೂ ಆರೋಪಿತರ ಮನೆಗಳು ಆಜುಬಾಜು ಇದ್ದು, ಪಿರ್ಯಾದುದಾರರು ಈಗ ಹೊಸ ಮನೆ ಕಟ್ಟುತ್ತಿದ್ದು, ಇದರ ಮುಂದಿನ ಚಾವಣಿ ಕಟ್ಟಡ ಆರೋಪಿತರಿಗೆ ನಡೆದಾಡುವಾಗ ತಾಗುತ್ತದೆ ಎಂದು ಆರೋಪಿತರು ಈ ಮೊದಲಿನಿಂದಲೂ ಪಿರ್ಯಾದುದಾರರೊಂದಿಗೆ ತಂಟೆ ತಕರಾರು ಮಾಡುತ್ತಾ ಬಂದಿದ್ದು, ಹೀಗಿರುವಾಗ ದಿನಾಂಕಃ 06-04-2023 ರಂದು ಮಧ್ಯಾಹ್ನ 1.00 ಗಂಟೆಗೆ ಗೋಕಾಕ ಶಹರದ ಶಿಂದಿಕೂಟದ ಹತ್ತಿರ ಚಾಸಾ.1 ರವರು ತನ್ನ ಮನೆಯ ಕಟ್ಟಡದ ಬಗ್ಗೆ ಮಾತನಾಡಲು ಆರೋಪಿತರ ಬಳಿ ಹೋದಾಗ 2 ನೇ ಆರೋಪಿತರಾದ ನೀವು ಚಾಸಾ.1 ರವರ ಬಲಗೈ ತಿರುವಿದಾಗ ಸಮಾನ್ಯ ಸ್ವರೂಪದ ಗಾಯ ಪಡಿಸಿರುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 323 ಸಹಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ವೇಳೆಯಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ 1 ನೇ ಆರೋಪಿಯಾದ ನೀವು ಚಾಸಾ.1 ರವರ ಕೈ ಹಿಡಿದು ಕಬ್ಬಿಣದ ಸಲಾಕೆಯಿಂದ ಚಾಸಾ.1 ರವರ ತಲೆಗೆ ಹೊಡೆಯುತ್ತಿರುವಾಗ, 2 ನೇ ಆರೋಪಿತನು ಚಾಸಾ.1 ರವರ ಬಲಗೈ ತಿರುವಿ ಈ ಭೂಸುಡಿ ಮಗನ ಜೀವ ಸಹಿತ ಬಿಡಬೇಡ ಎಂದು ಪ್ರಚೋದಿಸಿದಾಗ 1 ನೇ ಆರೋಪಿತನು ಇಟ್ಟಂಗಿಯಿಂದ ಚಾಸಾ.1 ರವರ ತಲೆಗೆ ಹೊಡಿ ಬಡಿ ಮಾಡಿ ತೀವ್ರ ಸ್ವರೂಪದ ಗಾಯ ಪಡಿಸಿರುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.324 ಸಹಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ವೇಳೆಯಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ 2 ನೇ ಆರೋಪಿತರಾದ ನೀವು ಚಾಸಾ.1 ರವರ ಬಲಗೈ ತಿರುವಿ ಈ ಭೊಸುಡಿ ಮಗನ ಜೀವ ಸಹಿತ ಬಿಡಬೇಡಾ ಎಂದು ಆರೋಪಿ 1 ರವರಿಗೆ ಪ್ರಚೊದನೆ ಮಾಡಿರುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 109 ಸಹಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ವೇಳೆಯಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನೀವು ಚಾಸಾ.1 ರವರಿಗೆ ಎ ಭೋಸುಡಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಉದ್ದೇಶಪೂರ್ವಕವಾಗಿ ಅವಮಾನ ಮಾಡಿ ಸಾರ್ವಜನಿಕ ಶಾಂತತಾ ಭಂಗ ಉಂಟು ಮಾಡಲು ಪ್ರಚೋದಿಸಿ ಭಾರತೀಯ ದಂಡ ಸಂಹಿತೆಯ ಕಲಂ 504 ಸಹಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ವೇಳೆಯಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನೀವು ಚಾಸಾ.1 ರವರಿಗೆ ನೀನು ಮನೆಯ ಕಟ್ಟಡದ ಮುಂದಿನ ಸಜ್ಜಾದ ಕೆಲಸ ಮಾಡುವುದನ್ನು ನಿಲ್ಲಿಸಲಿಲ್ಲಾಂದರ ನಿನ್ನ ಜೀವ ಸಹಿತ ಬಿಡುವುದಿಲ್ಲಾ  ಅಂತಾ ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿ ಭಾರತೀಯ ದಂಡ ಸಂಹಿತೆಯ ಕಲಂ.506 ಸಹಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ಪ್ರಶ್ನೆಃ1- ಈಗ ಓದಿ ಹೇಳಿದ ದೋಷಾರೋಪನೆ ನಿಮಗೆ ತಿಳಿಯಿತೆ?

ಎ 1- ಉತ್ತರಃ
ಎ 2- ಉತ್ತರಃ

ಪ್ರಶ್ನೆಃ2-ಮೇಲ್ಕಂಡ ದೋಷಾರೋಪನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಎ 1- ಉತ್ತರಃ
ಎ 2- ಉತ್ತರಃ

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಆರೋಪಿತರು ಕೊಟ್ಟ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ಈ ದಿನ ಅಂದರೆ ದಿನಾಂಕ 19-06-2024 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ.)

**(ರಾಜೀವ ಗೋಳಸಾರ)**
ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.